# <u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>

ಸಿ.ಸಿ. ನಂ.1/2024

ಪಿ.ಡಬ್ಲ್ಯೂಃ 1

ಸಿಡಬ್ಲ್ಯೂ-1

ಸಾಕ್ಷಿದಾರರ ಹೆಸರು : ಸಂತೋಷ ಪವಾರ

ತಂದೆಯ ಹೆಸರು : ಮಂಗೇಶ ಪವಾರ

ವಯಸ್ಸು : 58 ವರ್ಷ

ಉದ್ಯೋಗ : ವಲಯ ಅರಣ್ಯಾಧಿಕಾರಿ

ವಾಸ : ಕಾರ್ಗಲ್

ದಿನಾಂಕಃ 10-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ</u> ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1. ನಾನು ಅಗಸ್ಟ 2019 ರಿಂದ ಜನವರಿ 2021 ರ ತನಕ ಸುಂಕಸಾಳ ಶಾಖೆಯಲ್ಲಿ ಉಪ ವಲಯ ಅರಣ್ಯಾಧಿಕಾರಿ ಯಾಗಿ ಕಾರ್ಯ ನಿರ್ವಹಿಸಿದ್ದೇನೆ .

2. 1 ರಿಂದ 3 ಆರೋಪಿಗಳನ್ನು ನೋಡಿ ಗುರುತಿಸುತ್ತೇನೆ .ದಿಃ03-11-2019 ರಂದು ರಾತ್ರಿ ಗಸ್ತಿನಲ್ಲಿ ಇದ್ದ ಚಾಸಾ 5 ರವರು ಕಪ್ಪು ಬಣ್ಣದ ಸ್ಕಾರ್ಪಿಯೋ ವಾಹನ ಸುಂಕಸಾಳ ಗ್ರಾಮ ಪಂಚಾಯತಿ ಎದುರುಗಡೆ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ಬಾಗಿಲು ಹಾಗೂ ಕಿಟಕಿಯ ಗ್ಲಾಸ್ಗಳನ್ನು ಮುಚ್ಚಿ ನಿಲ್ಲಿಸಿರುವುದನ್ನು ಕಂಡು, ಆ ವಾಹನವನ್ನು ಅವರು ಬ್ಯಾಟರಿ ಬೆಳಕಿನಿಂದ ಒಳಗಡೆ ಪರಿಶೀಲಿಸಿದಾಗ, ಮಧ್ಯದ ಶೀಟ್ ನಲ್ಲಿ ಮಾಂಸದ ಚೀಲ, ರಕ್ತದ ಕಲೆ , ವನ್ಯ ಪ್ರಾಣಿಯ ಕೂದಲು ಹಾಗೂ ಕೆಳಗಡೆ ಜಂಗಲಿ ಜಾತಿಯ ಎಲೆ ಬಿದ್ದಿದೆ ಎಂದು ಕಂಡು ಬಂದಿದೆ, ಎಂಬುದಾಗಿ ನನಗೆ ಕರೆ ಮಾಡಿ ಬರಲು ಹೇಳಿದರು. ಆ ಮಾಂಸ ವನ್ಯ ಪ್ರಾಣಿಯ ಮಾಂಸವೇ ಇರಬಹುದು ಎಂದು ತಿಳಿಸಿದರು. ನನಗೆ ಆ ಕರೆ ಬಂದಿರುವುದು ಬೆಳಗಿನ ಜಾವ 230 ಗಂಟೆಗೆ. ನಾನು , ಚಾಸಾ-7, ಚಾಸಾ-2 ಹಾಗೂ ಚಾಸಾ -6 ರವರು ಹೋಗಿ ಪರಿಶೀಲಿಸಿದಾಗ , ಚಾಸಾ-5 ರವರು ಹೇಳಿದ್ದು , ನಿಜ ಎಂದು ಕಂಡು ಬಂದಿತು. ಅಲ್ಲಿ ಆ ಕೂಡಲೇ ಯಾರು ಇಲ್ಲದೆ ಇದ್ದುದರಿಂದ, ಆ

ವಾಹನದ ಆಸಾಮಿ ಮತ್ತು ಚಾಲಕನನ್ನು ಅಟಕಾಯಿಸಿ ಹಿಡಿಯಬೇಕು ಎಂದು ತಿರ್ಮಾನಿಸಿ, ಪಂಚರನ್ನು ಕರೆದುಕೊಂಡು ಬರಲು ಚಾಸಾ-3 ಮತ್ತು 4 ರವರ ಮನೆಗೆ ಹೋದೆವು. ಚಾಸಾ-3 ಮತ್ತು 4 ರವರಿಗೆ ಮೇಲ್ಕಂಡ ವಿಚಾರವನ್ನು ತಿಳಿಸಿ, ಪಂಚರಾಗಲು ಸಹಕರಿಸಲು ಕೇಳಿಕೊಂಡೆವು. ಅವರು ಅದಕ್ಕೆ ಒಪ್ಪಿಕೊಂಡರು.

**3**. ಅದೇ ದಿವಸ ಬೆಳಗಿನ ಜಾವ 3-00 ಗಂಟೆಯಿಂದ ಸುಂಕಸಾಳ ಗ್ರಾಮ ಪಂಚಾಯತಿ ಆವರಣದಲ್ಲಿ ನಾವು ಅಡಗಿ ಕುಳಿತೆವು. ಬೆಳಿಗ್ಗೆ 6-20 ರ ಸುಮಾರಿಗೆ ಸುಂಕಸಾಳ ಗ್ರಾಮ ಪಂಚಾಯತಿ ಎದುರುಗಡೆಯ ಮನೆಯವರಾದ ನಾರಾಯಣ ಮಹಾಬಲೇಶ್ವರ ಶೇಟ್ ರವರ ಮನೆಯಿಂದ 3 ಆಸಾಮಿಗಳು ಸದ್ರಿ ಸ್ಕಾರ್ಪಿಯೋ ವಾಹನ ಸಂಖ್ಯೆ ಕೆಎ-31/4023 ದ ಬಳಿ ಬಂದರು. ಆ ವಾಹನದ ಬಾಗಿಲು ತೆರೆಯುವಾಗ, ನಾವುಗಳು ಅವರನ್ನು ಹಿಡಿದು, ಅವರನ್ನು ವಿಚಾರಿಸಿದೆವು. ಮೊದಲನೆಯದಾಗಿ ಅವರ ಹೆಸರನ್ನು ಕೇಳಿದೆವು. ಅವರ ಪೈಕಿ ಒಬ್ಬರ ಹೆಸರು ಸೋಮನಾಥ ವಾಸುದೇವ ಶೇಟ್ , ಇನ್ನೊಬ್ಬರ ಹೆಸರು ಪೀಟರ್ ಡುಮ್ಮಿಂಗ್ ಪರ್ನಾಂಡಿಸ್ ಹಾಗೂ ಮತ್ತೊಬ್ಬರ ಹೆಸರು ಮಹೇಶ ನಾರಾಯಣ ಶೇಟ್ ಆಗಿರುತ್ತದೆ. ಸದ್ರಿ ಸೋಮನಾಥ ವಾಸುದೇವ ಶೇಟ್ ರವರು ಯಲ್ಲಾಪುರ ನಿವಾಸಿ , ಪೀಟರ್ ಯಲ್ಲಾಪುರ ತಾಲೂಕಿನ ಮಾಗೋಡು ನಿವಾಸಿ ಹಾಗೂ ಮಹೇಶ ಸುಂಕಸಾಳ ಗ್ರಾಮದವರಾಗಿರುತ್ತಾರೆ. ಅವರನ್ನು ಒಳಗಡೆ ಇದ್ದ ಮಾಂಸ ಬಗ್ಗೆ ವಿಚಾರಿಸಿದಾಗ, ಅವರು ಕಾಡು ಕುರಿ ಮಾಂಸ ಎಂದು ಒಪ್ಪಿಕೊಂಡಿರುತ್ತಾರೆ. ಸೋಮನಾಥ ರವರು ಸುಂಕಸಾಳದ ಅಜ್ಜಿ ಮನೆಗೆ ಬಂದು ಸ್ವಲ್ಪ ಮಾಂಸವನ್ನು ಬೇಯಿಸಿ ತಿಂದಿರುತ್ತೇವೆ ಎಂದು ಹೇಳಿರುತ್ತಾರೆ.

**4.** ನಂತರ ವಾಹನದಲ್ಲಿದ್ದ ಮಾಂಸವು 5.2 ಕೆಜಿ ತೂಕ ಇತ್ತು. ಅದನ್ನು ಪಂಚರ ಸಮಕ್ಷಮ ಜಪ್ತು ಮಾಡಿಕೊಂಡಿರುತ್ತೇವೆ . ಸದ್ರಿ ವಾಹವನ್ನು ಪರಿಶೀಲಿಸಿದಾಗ, ಬಂದೂಕಿನ 2 ಕಾಟ್ರೆಜ್‌ಗಳು ಮತ್ತು 8 ಚೇರಿ ಕಾಟ್ರೆಜ್ ಗಳು ಕಂಡು ಬಂದು, ಆ 8 ಚೇರಿ ಕಾಟ್ರೆಜ್ ನಲ್ಲಿ 2 ಸಜೀವ ಹಾಗೂ 6 ಖಾಲಿ ಕಾಟ್ರೆಜ್ ಗಳಾಗಿತ್ತು. ಚೇರಿ ತುಂಬುವ 1 ರಾಡ್, 1 ಹೆಡ್ ಲೈಟ್, ನೋಕಿಯಾ ಮತ್ತು ಲಾವಾ ಕಂಪನಿಯ ತಲಾ ಒಂದು ಕೀ ಪ್ಯಾಡ್ ಮೊಬೈಲ್ ಗಳು ಕಂಡು ಬಂದಿತು. ಅವುಗಳಿಗೆ 1 ರಿಂದ 7 ರ ತನಕ oil chock ನಿಂದ ನಂಬರ್ ನೀಡಲಾಯಿತು. ಸದ್ರಿ 1 ರಿಂದ 7 ನಂಬರ್ ನಲ್ಲಿ ಸ್ಕಾರ್ಪಿಯೊ ವಾಹನ ಕೂಡ ಸೇರಿರುತ್ತದೆ. ಪಂಚರ

ಸಮಕ್ಷಮ ಸದ್ರಿ 1 ರಿಂದ 7 ಮಾಲುಗಳನ್ನು ಹಾಗೂ ಮೇಲೆ ಹೇಳಿದಂತಹ ಮೂರು ಆಸಾಮಿಗಳನ್ನು ದಸ್ತಗಿರಿ ಮಾಡಿ ವಲಯ ಅರಣ್ಯಾಧಿಕಾರಿ ಮಾಸ್ತಿಕಟ್ಟಾ ರವರ ಸಮಕ್ಷಮ ಹಾಜರು ಪಡಿಸಿರುತ್ತೇನೆ . ಪಿರ್ಯಾದಿಯನ್ನು ವಲಯ ಅರಣ್ಯಾಧಿಕಾರಿಗೆ ನೀಡಿರುತ್ತೇನೆ . ಸದ್ರಿ ಪಿರ್ಯಾದಿಯನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು.

**5**. ಮಹಜರನ್ನು ಸ್ಥಳದಲ್ಲೇ ಮಾಡಿರುತ್ತೇವೆ. ನಂತರ ವಲಯ ಅರಣ್ಯಾಧಿಕಾರಿ ಕಚೇರಿಯಲ್ಲಿ ಆ ಜಪ್ತು ಪಡಿಸಿಕೊಂಡ ಎಲ್ಲಾ ಮಾಲುಗಳ ಪೊಟೋ ತೆಗೆಯಲಾಯಿತು. ಸದ್ರಿ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು. ಸದ್ರಿ ಪೊಟೊ ಗಳು 4 ಹಾಳೆಗಳಲ್ಲಿ ಇದ್ದು, ಅವುಗಳನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು, ನಿಪಿ-3 ರಿಂದ 6 ಎಂದು ಗುರುತಿಸಲಾಯಿತು. ನಿಪಿ-4 ರಲ್ಲಿ ಇರುವ ವಾಹನ ಆ ಸ್ಕಾರ್ಪಿಯೋ ವಾಹನವಾಗಿದೆ. ನಿಪಿ-5 ರಲ್ಲಿ ರಕ್ತದ ಕಲೆ ಹಾಗೂ ಮಾಂಸ ಕಾಣುತ್ತದೆ. ನಿಪಿ-3 ರಲ್ಲಿ ಮೇಲೆ ಹೇಳಿದಂತಹ 2 ಮೊಬೈಲ್ , ಹೆಡ್ ಟಾರ್ಚ್ ಹಾಗೂ ಕಾಟ್ರೇಜ್ ಗಳು ಕಾಣುತ್ತದೆ.

**6**. ಸೋಮನಾಥ ವಾಸುದೇವ ಶೇಟ್ ರವರು ಸದ್ರಿ ಮಾಂಸವನ್ನು ಗಣಪತಿ ಶೇಟ್ ರವರು ತಂದು ಕೊಟ್ಟರು ಎಂದು ಹೇಳಿರುತ್ತಾರೆ. ನಂತರ 3 ಆರೋಪಿಗಳನ್ನು ನ್ಯಾಯಲಾಯದ ಮುಂದೆ ಸೂಕ್ತ ಬಂದೊಬಸ್ತಿನಲ್ಲಿ ಹಾಜರು ಪಡಿಸಿರುತ್ತೇನೆ .

**ಪಾಟೀ ಸವಾಲನ್ನು ಆರೋಪಿ ಪರ ಎಸ್ ಆರ್ ಎನ್ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.